ಅಲ್ಲದೇ, ಸರ್ಕಾರದ ಅಧಿಸೂಚನೆ ಸಂಖ್ಯೆ : ಸಂವ್ಯಾಶಾಇ/38/ಶಾಸನ/ 2003,

ಬೆಂಗಳೂರು ದಿನಾಂಕ : 08–03–04 ರಂದು ಕರ್ನಾಟಕ ಗ್ರಾಮ ರಕ್ಷಣಾ ದಳಗಳ ಅಧಿನಿಯಮ 1964ನ್ನು ಹಿಂತೆಗೆದುಕೊಂಡಿರುತ್ತದೆ.

1517 (1365) ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯು ಮೆ॥ ಜಿಂದಾಲ್ ಸ್ಟೀಲ್ ವರ್ಕ್ಸ್ ಇವರಿಗೆ ಸರಬರಾಜು ಮಾಡಿರುವ ಕ್ಯಾಲಿಬರೇಟೆಡ್ ಕಬ್ಬಿಣದ ಅದಿರಿನ ಪ್ರಮಾಣಕ್ಕೆ ರೂ.87.00 ಕೋಟಿಗಳ ಪಾವತಿಗೆ ಬೇಡಿಕೆ ಸಲ್ಲಿಸಲಾಗಿದೆಯೇ;

ಆ) ಮೆ॥ ಜಿಂದಾಲ್ ಸ್ಟೀಲ್ ವರ್ಕ್ಸ್‌ರವರಿಂದ ರೂ.87.00 ಕೋಟಿ ಹಣವನ್ನು ವಸೂಲಿ ಮಾಡಲು ಮೆ॥ ಮೈಸೂರು ಮಿನರಲ್ಸ್ ಲಿಮಿಟೆಡ್ (ಮೆ: ಎಂ.ಎಂ.ಎಲ್.) ಹಾಗೂ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು;

ಇ) ಮೆ॥ ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯು ಹಣ ಪಾವತಿಸಲು ನಿರಾಕರಿಸಿದರೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಈ) ಮೆ॥ ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯು ಹಣ ಪಾವತಿಸಲು ನಿರಾಕರಿಸಿದರೆ, ಆ ಸಂಸ್ಥೆಗೆ ಕಬ್ಬಿಣದ ಅದಿರಿನ ಪುಡಿಯ ಸರಬರಾಜನ್ನು ಸರ್ಕಾರವು ನಿಲ್ಲಿಸುವುದೇ;

ಉ) ಸರ್ಕಾರವು ಯಾವಾಗ ಗಣಿಗಾರಿಕೆಯನ್ನು ಸ್ಥಗಿತಗೊಳಿಸುವುದು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಹೌದು. ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯು ಮೆ॥ ವಿಜಯನಗರ ಮಿನರಲ್ಸ್ ಪ್ರೈ.ಲಿಮಿಟೆಡ್ (ಮೆ.ವಿ.ಎಂ.ಪಿ.ಎಲ್.) ಮತ್ತು ಮೆ: ಜಿಂದಾಲ್ ಸ್ಟೀಲ್ ಲಿಮಿಟೆಡ್ (ಮೆ: ಜೆ.ಎಸ್.ಡಬ್ಲ್ಯೂ) ಇವರಿಂದ ರೂ.118.00 ಕೋಟಿಗಳ ಬಾಕಿ ಹಣ ಸಲ್ಲಿಕೆಗೆ ಬೇಡಿಕೆ ಸಲ್ಲಿಸಿರುತ್ತದೆ. ಈ ಬಾಕಿ ಹಣವು ಕ್ಯಾಲಿಬರೇಟೆಡ್/ ಕಬ್ಬಿಣದ ಅದಿರು ಪುಡಿಗೆ ಸಲ್ಲಿಸಬೇಕಾಗಿರುವ ಪ್ರೀಮಿಯಂ, ಕ್ಯಾಲಿಬರೇಟೆಡ್/

ಲಂಪಿ ಕಬ್ಬಿಣದ ಅದಿರಿನ ಮಾರಾಟದ ಬಾಬ್ತು, ಎನ್.ಪಿ.ವಿ. (Net Present Value) ಮತ್ತು ಸ್ವಯಂ ನಿವೃತ್ತಿ ಯೋಜನೆಯ ಪರಿಹಾರ ಧನಗಳನ್ನು ಒಳಗೊಂಡಿರುತ್ತದೆ. ಈ ಒಟ್ಟು ಮೊಬಲಗಿಯಲ್ಲಿ ರೂ.89.02 ಕೋಟಿಗಳು ಕ್ಯಾಲಿಬರೇಟೆಡ್/ಲಂಪಿ ಕಬ್ಬಿಣದ ಅದಿರನ್ನು ಮೆ॥ ಜೆ.ಎಸ್.ಡಬ್ಲ್ಯೂ. ಕಂಪನಿಗೆ ಜಾಯಿಂಟ್ ವೆಂಚರ್ ಸಂಸ್ಥೆಯಿಂದ ಸರಬರಾಜಾದ ಕಬ್ಬಿಣದ ಅದಿರಿನ ಬಾಬ್ತು ಆಗಿರುತ್ತದೆ. ಈ ಒಟ್ಟು ಹಣವು ಅಂದಾಜಿನದಾಗಿದ್ದು, ಬಡ್ಡಿ (ಚಕ್ರಬಡ್ಡಿ ರೂಪದಲ್ಲಿ) ಯನ್ನು ಒಳಗೊಂಡಿದೆ ಮತ್ತು ಲೆಕ್ಕಪತ್ರಗಳ ಹೊಂದಾಣಿಕೆಯ ಷರತ್ತಿಗೆ ಒಳಪಟ್ಟಿರುತ್ತದೆ. ಈ ಬೇಡಿಕೆಯ ಬಗ್ಗೆ ಮೆ॥ ವಿ.ಎಂ.ಪಿ.ಎಲ್. ಸಂಸ್ಥೆಯು ವಿವಾದವನ್ನು ಎತ್ತಿರುತ್ತದೆ.

ಆ) ಬಾಕಿ ಹಣ ವಸೂಲಾತಿಯ ಬಗ್ಗೆ ಮೆ॥ ಎಂ.ಎಂ.ಎಲ್. ಸಂಸ್ಥೆಯು ಮೆ॥ ವಿ.ಎಂ.ಪಿ.ಎಲ್./ಮೆ॥ ಜೆ.ಎಸ್.ಡಬ್ಲ್ಯೂ. ಸಂಸ್ಥೆಯೊಂದಿಗೆ ವ್ಯವಹರಿಸುತ್ತಿದೆ. ಇತ್ತೀಚೆಗೆ ಮೆ॥ ವಿ.ಎಂ.ಪಿ.ಎಲ್. ಸಂಸ್ಥೆಯು ಎನ್.ಪಿ.ಯು. ಮತ್ತು ಸ್ವಯಂ ನಿವೃತ್ತಿ ಯೋಜನೆಯ ಬಾಬ್ತಿನಡಿಯಲ್ಲಿ ರೂ.4. 84 ಕೋಟಿ ಹಣವನ್ನು ಸಂಸ್ಥೆಗೆ ನೀಡಿರುತ್ತದೆ.

ಇ) ಪ್ರಸ್ತುತ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಮೆ॥ ವಿ.ಎಂ.ಪಿ.ಎಲ್. ಮತ್ತು ಜೆ.ಎಸ್.ಡಬ್ಲ್ಯೂ. ಸಂಸ್ಥೆಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಲು ಮತ್ತು ಅಧಿಕಾರಿಗಳೊಂದಿಗೆ ಸಮಾಲೋಚಿಸುವ ಸಲುವಾಗಿ ಮೆ॥ ಎಂ.ಎಂ.ಎಲ್. ಸಂಸ್ಥೆಯ ಆಡಳಿತ ಮಂಡಳಿಯು ಒಂದು ಸಮಿತಿಯನ್ನು ರಚಿಸಲು ಅನುಮೋದಿಸಿರುತ್ತದೆ. ಮುಂದುವರೆದಂತೆ, ಮೆ॥ ಎಂ.ಎಂ.ಎಲ್. ಸಂಸ್ಥೆಯ ಆಡಳಿತ ಮಂಡಳಿಯ ತೀರ್ಮಾನ ಹಾಗೂ ಸಮಿತಿಯ ವರದಿಗೆ ಅನುಸಾರವಾಗಿ ಬಾಕಿ ಇರುವ ಹಣವನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) –ಮೇಲಿನಂತೆ–

ಉ) ಈ ಸಮಸ್ಯೆಯನ್ನು ಮೆ॥ ಮೈಸೂರು ಮಿನರಲ್ಸ್ ಲಿಮಿಟೆಡ್ ಸಂಸ್ಥೆಯ ಆಡಳಿತ ಮಂಡಳಿಯು ಸರ್ಕಾರದ ಗಮನಕ್ಕೆ ತಂದ ನಂತರ ಸರ್ಕಾರವು ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುವುದು.